**ಚಿನ್ನದ ಕೊಳ್ಳುವಿಕೆ ಹೆಚ್ಚಾದಂತೆಯೇ ಇತ್ತ ಅಡಮಾನ ಮಾಡುವ ಕಂಪನಿಗಳೂ ಹೆಚ್ಚಾಗಿವೆ. ಸೆಲೆಬ್ರಿಟಿಗಳೆಲ್ಲ ಇಂತಹ ಅಡಮಾನ ಕಂಪೆನಿಗಳ ಪರವಾಗಿ ಜಾಹೀರಾತುಗಳಲ್ಲಿ ಕಾಣಿಸುವಷ್ಟರ ಮಟ್ಟಿಗೆ ಈ ಉದ್ದಿಮೆ ಬೆಳೆದುನಿಂತಿದೆ.**



ಅದೇನಿದ್ದರೂ ಹೆಚ್ಚಿನ ಪ್ರಮಾಣದಲ್ಲಿ ಬಂಗಾರವನ್ನು ಖರೀದಿಸುವ ಕಂಪನಿಗಳಿಗೆ, ದೊಡ್ಡ ದೊಡ್ಡ ಬ್ರ್ಯಾಂಡ್ ಗಳಿಗೆ ಸೀಮಿತ.

ಚಿನ್ನದ ಕೊಳ್ಳುವಿಕೆ ಹೆಚ್ಚಾದಂತೆಯೇ ಇತ್ತ ಅಡಮಾನ ಮಾಡುವ ಕಂಪನಿಗಳೂ ಹೆಚ್ಚಾಗಿವೆ. ಸೆಲೆಬ್ರಿಟಿಗಳೆಲ್ಲ ಇಂತಹ ಅಡಮಾನ ಕಂಪೆನಿಗಳ ಪರವಾಗಿ ಜಾಹೀರಾತುಗಳಲ್ಲಿ ಕಾಣಿಸುವಷ್ಟರ ಮಟ್ಟಿಗೆ ಈ ಉದ್ದಿಮೆ ಬೆಳೆದುನಿಂತಿದೆ. ಇಲ್ಲಿ ಗಮನಿಸಬೇಕಾದ ಅಂಶ ಇನ್ನೊಂದಿದೆ. ಹಿಂದೆ ಚಿನ್ನ ಅಡ ಇಡುವ ಅಥವಾ ಇರಿಸಿಕೊಳ್ಳುವ ಕಂಪನಿಗಳು ಹೆಚ್ಚು ಇರುತ್ತಿರಲಿಲ್ಲ. ಅಲ್ಲಲ್ಲಿ 'ಮಾರ್ವಾಡಿ ಅಂಗಡಿ'ಯಲ್ಲಿ ಅಥವಾ ತಮ್ಮ ಪರಿಚಯದ 'ಸೊನಗಾರ'ನ ಬಳಿ ಚಿನ್ನ ಇಟ್ಟು ದುಡ್ಡು ಪಡೆಯುತ್ತಿದ್ದರು. ನಿರ್ದಿಷ್ಟ ಸಮಯದಲ್ಲಿ ದುಡ್ಡು ವಾಪಾಸು ಬರದಿದ್ದರೆ ಆ ಆಭರಣ ಹರಾಜಾಗುತ್ತಿತ್ತು. ಹೀಗೆ ದುಡ್ಡು ಕಳೆದುಕೊಂಡವರ ಸಂಖ್ಯೆ ಹಿಂದಿನ ಪೀಳಿಗೆಯಲ್ಲಿ ಬಹಳ ಜಾಸ್ತಿ.

ಮಕ್ಕಳು– ಮೊಮ್ಮಕ್ಕಳಿಗೆಂದು ಕೂಡಿಟ್ಟ ಚಿನ್ನ ಹೀಗೆ ಕೋರ್ಟಿನ ವ್ಯಾಜ್ಯಕ್ಕೆ, ಗಂಡಸರ ಶೋಕಿಗಳಿಗೆ ಬಲಿಯಾದ ಕಥೆಗಳು ನಮ್ಮಲ್ಲಿ ಕಡಿಮೆ ಇಲ್ಲ. ಆಗೆಲ್ಲ ಬ್ಯಾಂಕುಗಳು ಇರುತ್ತಿರಲಿಲ್ಲ. ಸೊನಗಾರರು ಮನೆಗೆ ಬಂದು ಆಭರಣದ ಆರ್ಡರು ತೆಗೆದುಕೊಳ್ಳುತ್ತಿದ್ದರು. 'ಘಟ್ಟಿ ಮಾಡು... ತುಸುಕಲು ಬ್ಯಾಡ... ಬಾಳಿಕೆ ಬರಬಕು..' ಎಂದೆಲ್ಲ ಮನೆಯ ಯಜಮಾನ್ತಿ ಹೇಳಿದರೆ ಸೊನಗಾರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ನೀವ್ ಹೋದ್ರೂ ಅಡ್ಡಿಕೆ ಹೋಗಂಗಿಲ್ಲ ಬಿಡ್ರಿ... ಅಂಥಾದ್ದು ಮಾಡಿ ತರ್ತೀನಿ...' ಅನ್ನುತ್ತಿದ್ದ! ಅದಕ್ಕೂ ತಿಂಗಳುಗಳ ಸಮಯ ಬೇಕು. ಆಗಾಗ ಹೇಳಿ ಕಳಿಸಿದ ಮೇಲೆ ಕೆಲಸ ನೆನಪಾಗಿ ಗಟ್ಟಿಮುಟ್ಟಾದ ಅಡ್ಡಿಕೆ ಮಾಡಿಕೊಂಡು ಬರುತ್ತಿದ್ದ. ಉಣ್ಣಲು ಕಷ್ಟವಿದ್ದರೂ ಚಿಕ್ಕ ಪುಟ್ಟ ಆಭರಣಗಳನ್ನು ಮಾಡಿಸಿಕೊಳ್ಳುವ ಸಂತೋಷವನ್ನು ಕಳೆದುಕೊಳ್ಳಲು ಯಾವ ಹೆಣ್ಣುಮಕ್ಕಳೂ ಸಿದ್ಧರಿರಲಿಲ್ಲ. ಅದು ಆಗಿನ ಮಧ್ಯಮ ವರ್ಗ. ಹೊಲ ಮನೆ ಇದ್ದ ಜನ. ಆಗಾಗ ಸ್ವಲ್ಪ ದುಡ್ಡು ಗಿಡ್ಡು ಕಾಣುತ್ತಿದ್ದವರು. ಇವರಿಗಿಂತ ಉತ್ತಮ ಸ್ಥಿತಿಯಲ್ಲಿ ಇದ್ದವರು ವರ್ಷಕ್ಕೆ ಮೂರು– ನಾಲ್ಕು ಆಭರಣಗಳನ್ನು ಮಾಡಿಸಿಯೇ ಸೈ. ಕೂಡು ಕುಟುಂಬದಲ್ಲಿ ಅತ್ತೆ– ಸೊಸೆಯಂದಿರು ಆರ್ಡರು ಕೊಡುತ್ತಿದ್ದಾಗ ಸೊನಗಾರ ಎಲ್ಲವನ್ನೂ ಗುಟ್ಟಾಗಿ ನಡೆಸುವ, ಅವರವರ ಆಭರಣಗಳನ್ನು ಅವರಿಗೇ ತಲುಪಿಸುವ 'ಸೀಕ್ರೆಟ್ ಏಜೆಂಟ್' ಆಗಿಯೂ ಬದಲಾಗುತ್ತಿದ್ದ.

ದುಡ್ಡು ಆಸ್ತಿ ಏನೇನೂ ಇಲ್ಲದವರು ಹೆಚ್ಚೆಂದರೆ ಮೂಗುಬೊಟ್ಟು ಮಾಡಿಸಿಕೊಂಡು ಹಾಕಿಕೊಳ್ಳುತ್ತಿದ್ದರು. ಅವರಿಗೆ 'ಭಂಗಾರ್ ನೀರು ಕುಡುಸಿದ' ಒಡವೆ ಅಂದರೆ 'ಗೋಲ್ಡ್ ಪ್ಲೇಟೆಡ್' ಒಡವೆ ಇರುತ್ತಿತ್ತು. ಬೆಳ್ಳಿಗೆ ಬಂಗಾರದ ನೀರು ಕುಡಿಸುವ 'ಕೆಟಲಿಸಂ' ಎನ್ನುವ ರಾಸಾಯನಿಕ ಕ್ರಿಯೆಯೇ ಬಲು ಆಸಕ್ತಿದಾಯಕ. ಈಗ ಈ ಒಡವೆಯನ್ನು 'ಒನ್ ಗ್ರಾಂ ಗೋಲ್ಡ್' ಎನ್ನುವ ಹೆಸರಿನಿಂದ ಗುರುತಿಸುತ್ತಾರೆ.

## ಮಧ್ಯಮ ವರ್ಗದ ಮೋಹ

ಹಳೇ ಕಾಲದ ಜನರ ಈ ಸ್ವರ್ಣಮೋಹ ಈಗಿನ ಯುವಜನರಲ್ಲೂ ಮುಂದುವರಿದಿದೆಯೆ? ಬೆಂಗಳೂರಿನ ಪ್ರಮುಖ ಚಿನ್ನಾಭರಣ ಬ್ರ್ಯಾಂಡ್‌ಗಳಲ್ಲಿ ಒಂದಾಗಿರುವ ಸಿ.ಕೃಷ್ಣಯ್ಯ ಚೆಟ್ಟಿ ಗ್ರೂಪ್ ಆಫ್ ಜುವೆಲರ್ಸ್ ನ ಮ್ಯಾನೇಜಿಂಗ್ ಡೈರೆಕ್ಟರ್ ಡಾ. ವಿನೋದ್ ಹಯಗ್ರೀವ ಅವರು ಹೇಳುತ್ತಾರೆ– 'ದುಡಿಯುವ ಸಾಮರ್ಥ್ಯ ಜಾಸ್ತಿ ಆದಂತೆ ನಮ್ಮ ಯುವವರ್ಗದಲ್ಲೂ ಒಡವೆ

## ನೂರೆಂಟು ಉಪಯೋಗ

ಚೊಕ್ಕ ಚಿನ್ನವನ್ನು ಅಪರಂಜಿ ಎನ್ನುತ್ತಾರೆ. ಸುವರ್ಣ, ಚಿನ್ನ, ಬಂಗಾರ, ಸ್ವರ್ಣ, ಹೇಮ, ಕನಕ, ಹಿರಣ್ಯಂ, ರುಗ್ಮ, ರುಕಂ, ಭರ್ಮ, ಜಾತರೂಪಂ, ಶತಕುಂಭಂ, ಚಾಮಿಕರಂ, ಜಾಂಬೂನದಂ, ಮಹಾರಜತಂ, ಗೌರಂ, ದೀಪ್ತಂ, ತೇಜಸ್, ಮಹಾಧಾತು ಎಂಬೆಲ್ಲ ಹೆಸರುಗಳಿಂದ ಕರೆಸಿಕೊಳ್ಳುವ ಈ ದಿವ್ಯ ಲೋಹಕ್ಕೆ ಉಪಯೋಗಗಳು ಹಲವಾರು.

ಚೊಕ್ಕವಾಗಿ ಪೂಜೆಗೆ, ಮತ್ತು ಧರಿಸಲು ಆಭರಣಕ್ಕೆ ಉಪಯೋಗವಾಗುವ ಚಿನ್ನ ಔಷಧೀಯ ಗುಣಗಳನ್ನು ಹೊಂದಿದೆ. ಹಾಗಾಗಿ ಆಯುರ್ವೇದೀಯ ಔಷಧಗಳಲ್ಲಿ ಬಳಕೆಯಾಗುವ ಚಿನ್ನ ಸುವರ್ಣ ಪ್ರಾಶನಕ್ಕೆ, ಬೇರೆ ಬೇರೆ ಔಷಧಿಗಳ ಪರಿಣಾಮ ಹೆಚ್ಚಿಸಲು, ಆರೋಗ್ಯವರ್ಧನೆಗೆ ಬಳಕೆಯಾಗುತ್ತದೆ.

ಆಧುನಿಕ ವೈದ್ಯಕೀಯ ವಿಜ್ಞಾನದಲ್ಲೂ ಚಿನ್ನ ಬಳಕೆಯಾಗುತ್ತದೆ. ಮನುಷ್ಯ ಮೈ– ತಾಪಮಾನ ಸಂಪರ್ಕಕ್ಕೆ ಬಂದಾಗಲೂ ಯಾವ ಪರಿಣಾಮವನ್ನೂ ಬೀರದೆ ತನ್ನತನವನ್ನು ಉಳಿಸಿಕೊಳ್ಳುವ ಚಿನ್ನಕ್ಕೆ ಹಲವು ಉಪಯೋಗಗಳಿವೆ. ವೈದ್ಯಕೀಯ ತಂತ್ರಜ್ಞಾನ, ಆಪರೇಶನ್ ಗೆ ಬಳಸುವ ಉಪಕರಣಗಳು, ಜೀವ ರಕ್ಷಕ ಯಂತ್ರಗಳಲ್ಲಿ ಚಿನ್ನದ ಬಳಕೆ ಆಗುತ್ತದೆ.